## ಹಿರಿಯ ಸಿವಿಲ್ ನ್ಯಾಯಾಧೀಶರು ವ ನ್ಯಾ ದಂ ಪ್ರ ವರ್ಗ ಮುದ್ದೇಬಿಹಾಳ ಮುದ್ದೇಬಿಹಾಳ.

ಸಿ ಸಿ ನಂಃ 43ಃ2018

ಸಿ ಡಬ್ಲ್ಯು 1

ಪಿ ಡಬ್ಲ್ಯು 1

ಸಾಕ್ಷಿಯ ಹೆಸರು ಃ ಲಕ್ಷ್ಮಿಬಾಯಿ
ತಂದೆಯ ಹೆಸರು ಃ ಹುಲಗಪ್ಪ ಮಾದರ
ವಯಸ್ಸು ಃ 40 ವರ್ಷ
ಉದ್ಯೋಗ ಃ ಬಾಳೆಹಣ್ಣುವ್ಯಾಪಾರ
ವಾಸಸ್ಥಳ ಃ ಮುದ್ನಾಳ

(ಸಾಕ್ಷಿಯನ್ನು ಕರೆಯಿಸಿ ಈ ದಿವಸ ಅಂದರೆ ದಿನಾಂಕಃ 07-12-2019 ರಂದು ಪ್ರಮಾಣ ವಚನ ಭೋಧಿಸಲಾಯಿತು)

## ಮುಖ್ಯ ವಿಚಾರಣೆ ಃ ಸ ಸ ಅ ಅವರಿಂದ

ಆರೋಪಿ 1 ರಿಂದ 12 ರವರ ಪರಿಚಯ ಇದೆ. ಚಾಸಾ-2 ರಿಂದ 8 ರವರ ಪರಿಚಯ ಇದೆ. ಚಾಸಾ-8 ನನ್ನ ಮಗಳು. ನಾನು ಬಾಳೇಹಣ್ಣು ವ್ಯಾಪಾರ ಮಾಡುತ್ತೇನೆ. ದೂರು ಕೊಡುವಾಗ ರೇಶ್ಮಾಗೆ 16 ವರ್ಷ ಪ್ರಾಯ ಇತ್ತು. ರೇಶ್ಮಾ 9ನೇ ತರಗತಿ ಕಲಿಯುತ್ತಿದ್ದಳು. 9ನೇ ಆರೋಪಿ ಆಕಾಶ ಇತನು ರೇಶ್ಮಾ ಅವಳಿಗೆ ಪ್ರೀತಿಸುತ್ತಿದ್ದೇನೆ ಎಂದು ಚುಡಾಯಿಸುತ್ತಿದ್ದನು. ನನ್ನ ಮಗಳು ಮನೆಗೆ ಬಂದು ಈ ವಿಚಾರವನ್ನು ಹೇಳುತ್ತಿದ್ದಳು. ನಾನು ಅಶೋಕ ಅವರ ಮನೆಯವರನ್ನು ಕರೆಸಿ ಬುದ್ದಿ ಹೇಳಿದ್ದೆವು. ಈ ವಿಚಾರವಾಗಿ ನನ್ನ ತಮ್ಮ ಹಣಮಂತ ಚಾಸಾ-4 ಇತನು ಆಕಾಶನನ್ನು ಕರೆಸಿ ಬುದ್ದಿ ಹೇಳಿ 2 ಏಟು ಹೊಡೆದಿದ್ದನು. ನಂತರ 4 ಮಂದಿ ಹಿರಿಯರನ್ನು ಕರೆಸಿ ಆರೋಪಿತರಿಗೆ ಬುದ್ದಿ ಹೇಳಿ ನನ್ನ ಮಗಳ ತಂಟೆಗೆ ಬರಬೇಡ ಎಂದು ಹೇಳಿದರು. 2-3 ತಿಂಗಳ ನಂತರ ಆರೋಪಿತರೆಲ್ಲರೂ ಗುಂಪು ಕಟ್ಟಿಕೊಂಡು ಬಂದು ರಾಡ್, ಬಡಿಗ,

ಕೊಡಲಿ ಕಾವು ಹಿಡಿದುಕೊಂಡು ಒಂದು ದಿನ ಮದ್ಯಾಹ್ನ ಬಂದು, ಚಾಸಾ-4 ರಿಂದ 7 ರವರಿಗೆ ಹಲ್ಲೆ ಮಾಡಿದರು. 1ನೇ ಆರೋಪಿ ಭೀಮಶಿ ಇತನು ಕೊಡಲಿ ಕಾವಿನಿಂದ ಮತ್ತು ರಾಡಿನಿಂದ ಚಾಸಾ-4 ಹಣಮಂತ ಅವರಿಗೆ ತಲೆಗೆ ಹಲ್ಲೆ ಮಾಡಿದರು. 3ನೇ ಆರೋಪಿ ರಾಜು, 4ನೇ ಆರೋಪಿ ದೀಪಕ ಮತ್ತು 5ನೇ ಆರೋಪಿ ರವಿರವರುಗಳು ಸೇರಿ ಮುತ್ತಪ್ಪರವರಿಗೆ ಬೆನ್ನಿಗೆ ರಾಡನಿಂದ ಹೊಡೆದಿದ್ದಾರೆ. 7ನೇ ಆರೋಪಿ ಶಾಂತವ್ವ , 12ನೇ ಆರೋಪಿ ಮಹಾದೇವಿ, 8ನೇ ಆರೋಪಿ ಸೋನಿ ರವರು ನನ್ನ ತಂಗಿ ಭಾರತಿ ಚಾಸಾ-7 ರವರಿಗೆ ತಲೆ ಕೂದಲು ಹಿಡಿದು ನೆಲಕ್ಕೆ ಬಗ್ಗಿಸಿ, ಕೈಯಿಂದ ಹಲ್ಲೆ ಮಾಡಿದ್ದರೆ. ಮತ್ತು ಉಳಿದ ಆರೋಪಿತರು ಬಡಿಗೆಯಿಂದ ಹಲ್ಲೆ ಮಾಡಿದ್ದಾರೆ. 7 ಮತ್ತು 12 ನೇ ಆರೋಪಿತರು ಚಾಸಾ-6 ದುರುಗಮ್ಮನಿಗೆ ಹಲ್ಲೆ ಮಾಡಿದ್ದಾರೆ. ದುರಗಮ್ಮಳನ್ನು ಗದ್ದೆಮ್ಮ ಶೆಟ್ಟೆಪ್ಪ ಮಾದರ ಎಂದು ಕರೆಯುತ್ತಾರೆ. ನಾನು ಬಾಳೆಹಣ್ಣು ವ್ಯಾಪಾರ ಮಾಡುತ್ತಿದ್ದು, ನನಗೆ ನನ್ನ ತಂಗಿ ಚಾಸಾ-7 ಪೋನ ಮಾಡಿ ಗಲಾಟೆ ಬಗ್ಗೆ ತಿಳಿಸಿದರು. ನಾನು ಅಳುತ್ತಾ ಹೋಗುತ್ತಿರುವಾಗ ಚಾಸಾ-9 ಮತ್ತು 10 ನನ್ನನ್ನು ವಿಚಾರಿಸಿದರು. ನಾನು ಅವರಿಗೆ ವಿಷಯ ತಿಳಿಸಿ, ಅವರನ್ನು ಕರೆದುಕೊಂಡು ಹೋಗಿ ಜಗಳ ಬಿಡಿಸಿದರು. ಚಾಸಾ-4 ರಿಂದ 7 ರವರನ್ನು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದೆನು. ಚಾಸಾ-4 ರಿಂದ 6 ರವರನ್ನು ಬಿಜಾಪೂರ ಸರ್ಕಾರಿ ಆಸ್ಪತ್ರೆಗೆ ರೆಫರ್ ಮಾಡಿದರು. ಚಾಸಾ-4 ರಿಂದ 6 ರವರು 3 ದಿನಗಳು ಬಿಜಾಪೂರ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು. ಘಟನೆಯಾಗಿ 3 ದಿನದ ನಂತರ ದೂರು ಕೊಟ್ಟಿದ್ದೆನು. ನಾನು ಕೊಟ್ಟ ದೂರು ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರಲ್ಲಿ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ

ಗುರುತಿಸುತ್ತಾರೆ. ಆರೋಪಿತರು ಕಲ್ಲಿನಿಂದ ಚಾಸಾ-6 ರವರಿಗೆ ಹಲ್ಲೆ ಮಾಡಿದ್ದಾರೆ . ಆರೋಪಿತರು ಉಪಯೋಗಿಸಿದ ರಾಡು, ಬಡಿಗೆ ಮತ್ತು ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. 2 ಕಬ್ಬಿಣದ ರಾಡುಗಳನ್ನು ಮು ಮಾ-1 ಮತ್ತು 2 ಎಂದು ಗುರುತಿಸಲಾಯಿತು. ಕಟ್ಟಿಗೆ ಕಾವು ಮು ಮಾ-3 ಎಂದು, ಬಿದರಿನ ಕಾವು ಮು ಮಾ-4 ಎಂದು, 3 ಬಿದರಿನ ಬಡಿಗೆಗಳನ್ನು ಮು ಮಾ-5 ರಿಂದ 7 ಎಂದು, 5 ಕಲ್ಲುಗಳನ್ನು ಒಟ್ಟಾಗಿ ಮು ಮಾ-8 ಎಂದು ಗುರುತಿಸಲಾಯಿತು. ಸದರಿ ಜಗಳವು ಮದಾಹ್ನ ಸುಮಾರು 1-30 ಗಂಟೆಗೆ ನಡೆದಿದೆ. ಚಾಸಾ-7 ಭಾರತಿ ಘಟನೆ ಬಗ್ಗೆ ನನಗೆ ಹೇಳಿದರು. ಆರೋಪಿ 3 ಮತ್ತು 4 ರಾಜು ಮತ್ತು ದೀಪಕ ರವರು ಚಾಸಾ-7 ರವರಿಗೆ ಸೀರೆ, ಜಂಪರ ಹಿಡಿದು ಎಳೆದಾಡಿ ಅವಮಾನಪಡಿಸಿದರು.

( ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಸಸಅ ಇವರಿಂದ

8 ಮತ್ತು 12 ನೇ ಆರೋಪಿತರು ಚಾಸಾ-6 ರವರಿಗೆ ತಲೆಕೂದಲು ಹಿಡಿದು ನೆಲಕ್ಕೆ ಕೆಡವಿ, ಕಲ್ಲಿನಿಂದ ಹೊಡಿ ಬಡಿ ಮಾಡಿದ್ದಾರೆ ಎಂದರೆ ಸರಿ. 1ನೇ ಆರೋಪಿ ಚಾಸಾ-4 ರವರಿಗೆ ರಾಡಿನಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದನು, ಚಾಸಾ-4 ಪ್ರಜ್ಞೆ ತಪ್ಪಿ ಬಿದ್ದನು ಎಂದರೆ ಸರಿ . 2ನೇ ಆರೋಪಿ ಶ್ರೀನೀವಾಸನು ಮುತ್ತಪ್ಪನಿಗೆ ಕೊಡಲಿಯಿಂದ ಬಾಯಿಗೆ ಹೊಡೆದು ರಕ್ತಗಾಯಪಡಿಸಿದನು ಎಂದರೆ ಸರಿ. 3 ಮತ್ತು 4ನೇ ಆರೋಪಿತರು ನನ್ನ ತಾಯಿ ಮತ್ತು ತಂಗಿಗೆ ಸೀರೆ ಹಿಡಿದು ಎಳೆದಾಡಿ ಅವಾಚ್ಯ ಶಬ್ದಗಳಿಂದಬೈದು

ಅವಮಾನಪಡಿಸಿದರು ಎಂದರೆ ಸರಿ. ಆರೋಪಿತರೆಲ್ಲರೂ, ಚಾಸಾ-4 ರಿಂದ 7 ರವರಿಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದರೆ ಸರಿ.

ಮುಂಜಾನೆಯ ನ್ಯಾಯಾಲಯದ ಅವಧಿ ಮುಗಿದಿರುವುದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ ಮುದ್ದೇಬಿಹಾಳ.

(ಸಾಕ್ಷಿಯನ್ನು ಕರೆಯಿಸಿ ಈ ದಿವಸ ಅಂದರೆ ದಿನಾಂಕಃ 07-12-2019 ರಂದು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನನಗೆ ಓದು, ಬರಹ ಇಲ್ಲ. ನಾನು ಕಂಪ್ಯೂಟರ್ ಅಂಗಡಿಯಲ್ಲಿ ಮಾವಿನಭಾವಿ ವಕೀಲರ ಮೂಲಕ ದೂರ ತಯಾರಿಸಿ ಕೊಟ್ಟಿದ್ದೆನು. ನಾನು ಪೋಲಿಸ್ ಠಾಣೆಗೆ ಹೋಗಿ ಘಟನೆ ಬಗ್ಗೆ ಹೇಳಿದ್ದು, ಪೋಲಿಸರು ಅದನ್ನು ಬರೆದುಕೊಟ್ಟಿದ್ದು, ನಂತರ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿಸಿ ಕೊಟ್ಟಿದ್ದೇನೆ. ನಿಪಿ-1 ಬಿಜಾಪೂರದಲ್ಲಿ ತಯಾರಿಸಿದೆನು. ನಿಪಿ-1ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪೋಲಿಸರು ಬಿಜಾಪೂರ ಆಸ್ಪತ್ರೆಗೆ ಬಂದಿದ್ದಾರೆ. ಅಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಎಷ್ಟು ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಎಫ್ ಐ ಆರ್ ಆದ ನಂತರ ಪೋಲಿಸರು ನನ್ನ ಒಂದು ಸಹಿ ಪಡೆದಿರುತ್ತಾರೆ. ನಾನು

ಪೋಲಿಸ ಠಾಣೆಗೆ ಈ ಕೇಸಿನ ಸಂಬಂಧ ಆಗಾಗ ಹೋಗಿದ್ದೇನೆ. ನಾನು ಘಟನೆಯನ್ನು ಖುದ್ದಾಗಿ ನೋಡಿದ್ದೇನೆ. ಘಟನೆ ಖುದ್ದಾಗಿ ನೋಡಿದ್ದೇನೆ ಎಂದು ನಿಪಿ-1 ರಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು 3 ಚಕ್ರದ 2 ರಿಕ್ಷಾದಲ್ಲಿ ಬಂದರು. ನಿಪಿ-1 ರಲ್ಲಿ ಬರೆದ ವಿಚಾರ ಗೊತ್ತಿದೆ. 2 ಆಟೋ ರಿಕ್ಷಾದಲ್ಲಿ ಆರೋಪಿತರು ಬಂದರು ಎಂದು ನಿಪಿ-1 ರಲ್ಲಿ ಹೇಳಿ ಬರೆಸಿಲ್ಲ. ರೇಶ್ಮಾ ನನ್ನ ಮಗಳು. ರೇಶ್ಮಾಳಿಗೆ 9ನೇ ಆರೋಪಿ ಆಕಾಶ ಚುಡಾಯಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9ನೇ ಆರೋಪಿ ಕಾಲೇಜಿಗೆ ಹೋಗುತ್ತಿದುದರಿಂದ ಅವನ ಭವಿಷ್ಯ ಹಾಳು ಮಾಡಲು, ನಾನು ಸುಳ್ಳು ದೂರು ಕೊಟ್ಟು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆಯ ಮುಂದೆ ಬಂದು ಯಾವುದೇ ಹಲ್ಲೆ ಮಾಡಿಲ್ಲ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಭಾರತಿ ಪೋನ ಮಾಡಿದ ನಂತರ ನಾನು ಬಜಾರ್‌ನಿಂದ ಮನೆಗೆ ಹೋಗಿದ್ದೇನೆ. ಆ ನಂತರ ಆರೋಪಿತರು ರಿಕ್ಷಾದಲ್ಲಿ ಬಂದಿದ್ದಾರೆ. ನಾನು ಬಜಾರ್‌ನಿಂದ ಮನೆಗೆ ಹೋದ ನಂತರ ಆರೋಪಿತರು ರಿಕ್ಷಾ ತೆಗೆದುಕೊಂಡು ಬಂದಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-4 ರಿಂದ 7 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾರಿಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಮದುವೆ ಆಗಿದೆ. ನಾನು ಪೋಲಿಸರ ಮುಂದೆ ಪುನರ್ ಹೇಳಿಕೆ ಕೊಟ್ಟಿದ್ದೇನೆ ಮತ್ತು ಪುನರ್ ಹೇಳಿಕೆಯಲ್ಲಿ ಆರೋಪಿತರು ರಿಕ್ಷಾ ತಂದಿಲ್ಲ ಮತ್ತು ಬಡಿಗೆ ಮತ್ತು ಕೊಡಲಿ ತಂದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಇಲ್ಲ ಸಲ್ಲದ ಆಪಾದನೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಮು

ಮಾ 1 ರಿಂದ 8 ಎಲ್ಲ ಕಡೆ ಸಿಗುತ್ತದೆ ಎಂದರೆ ಮು ಮಾ-1 ರಿಂದ 8 ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ ಮುದ್ದೇಬಿಹಾಳ.